

# ಬಂಗಾರದ ಮನುಷ್ಯ, ಬೂತಯ್ಯನ ಶಿಲ್ಪಿ

ಆಯಾಮ ಐದು

'ಬಂಗಾರದ ಮನುಷ್ಯ', 'ಬೂತಯ್ಯನ ಮಗ ಅಯ್ಯು', 'ಹೇಮಾವತಿ' – ಈ ಮೂರು ಸಿನಿಮಾಗಳಷ್ಟೇ ಸಾಕು, ನಿರ್ದೇಶಕ ಸಿದ್ಧಲಿಂಗಯ್ಯನವರನ್ನು ಕನ್ನಡ ಸಿನಿಮಾ ಚರಿತ್ರೆ ಎಲ್ಲ ಕಾಲಕ್ಕೂ ನೆನಪಿನಲ್ಲಿರಿಸಿಕೊಳ್ಳಲಿಕ್ಕೆ. ತಮ್ಮ ಸಿನಿಮಾಗಳ ಮೂಲಕ ದಾಂಪತ್ಯ, ಕುಟುಂಬ ಹಾಗೂ ಗ್ರಾಮಗಳ ಆರೋಗ್ಯಕರ ಮಾದರಿಗಳನ್ನು ಕಟ್ಟಿಕೊಟ್ಟ ನಿರ್ದೇಶಕರಿವರು.

ಪುಟ್ಟಣ್ಣ ಕಣಗಾಲರ ತಾರಾವರ್ಚಸ್ಸು ಹಾಗೂ ಹೊಸ ಅಲೆ ಸಿನಿಮಾಗಳ ಹೊಳಪಿನ ನಡುವೆಯೂ ಸದ್ದಿಲ್ಲದೆ ಸಿನಿಮಾಗಳನ್ನು ರೂಪಿಸಿದ ಸಿದ್ಧಲಿಂಗಯ್ಯ, ಈ ಮಣ್ಣಿನ ತವಕತಲ್ಲಣಗಳನ್ನು ಚಿತ್ರಿಸಲು ಹಂಬಲಿಸಿದ ದೃಶ್ಯಮಾಧ್ಯಮದ ವಿಶಿಷ್ಟ ವಯ್ಯಾಕರಣಿ. ಗ್ರಾಮಭಾರತದ ಶಕ್ತಿ ಹಾಗೂ ದೌರ್ಬಲ್ಯಗಳನ್ನು ಸಿದ್ಧಲಿಂಗಯ್ಯನವರಂತೆ ಅನನ್ಯವಾಗಿ ಚಿತ್ರಿಸಿದ ಮತ್ತೊಬ್ಬ ನಿರ್ದೇಶಕ ಕನ್ನಡದಲ್ಲಿಲ್ಲ. 'ಬಂಗಾರದ ಮನುಷ್ಯ' ಹಾಗೂ 'ಬೂತಯ್ಯನ ಮಗ ಅಯ್ಯು' ಕನ್ನಡದ ಮುಖ್ಯವಾಹಿನಿಯ ಮಟ್ಟಿಗಷ್ಟೇ ಉತ್ತಮವಾದ ಕಲಾಕೃತಿಗಳಲ್ಲ; ಅವು ಭಾರತೀಯ ಚಿತ್ರರಂಗದ ಮಾಸ್ಟರ್‌ಪೀಸ್‌ಗಳೂ ಹೌದು.

'ಮೇಯರ್ ಮುತ್ತಣ್ಣ' (1969) ಮೂಲಕ ಚಿತ್ರರಂಗ ಪ್ರವೇಶಿಸಿದ ಸಿದ್ಧಲಿಂಗಯ್ಯನವರಿಗೆ ಯಶಸ್ಸು ದೊಡ್ಡ ಪ್ರಮಾಣದಲ್ಲಿ ಕೈಹಿಡಿದದ್ದು 'ಬಂಗಾರದ ಮನುಷ್ಯ' (1972) ಚಿತ್ರದಲ್ಲಿ. 104 ವಾರಗಳ ಕಾಲ ಪ್ರದರ್ಶನ ಕಂಡ ಈ ಸಿನಿಮಾ ರಾಜಕುಮಾರ್ ವೃತ್ತಿಜೀವನದ ಮಹೋನ್ನತ ಚಿತ್ರಗಳಲ್ಲೊಂದು. ಈ ಚಿತ್ರವನ್ನು ನೋಡಿದ ಅನೇಕ ಪದವೀಧರರು ನೇಗಿಲು ಹಿಡಿದದ್ದು, ಕೆಲವರು ತಮ್ಮ ಮನೆಗಳಿಗೆ 'ಬಂಗಾರದ ಮನುಷ್ಯ' ಎಂದು ನಾಮಕರಣ ಮಾಡಿದ್ದು, ಇವೆಲ್ಲವೂ ಸಿನಿಮಾವೊಂದು ಬೀರಬಹುದಾದ ಸಾಮಾಜಿಕ ಪರಿಣಾಮಗಳಿಗೆ ಉದಾಹರಣೆಯಂತಿದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕಥನಗಳನ್ನಾಧರಿಸಿದ 'ಬೂತಯ್ಯನ ಮಗ ಅಯ್ಯು' ಹಾಗೂ 'ಹೇಮಾವತಿ' ಸಿನಿಮಾಗಳಿಗೆ ಚಾರಿತ್ರಿಕ ಮಹತ್ವವಿದೆ. ಗ್ರಾಮಭಾರತದ ವಿರಸ–ಸರಸಗಳನ್ನು, ಮೌಲ್ಯಗಳ ಉತ್ಕರ್ಷ ಹಾಗೂ ಅಧಃಪತನಗಳನ್ನು ಬಹು ಮಾರ್ಮಿಕವಾಗಿ ಚಿತ್ರಿಸಿದ ಬೂತಯ್ಯ, ಅಯ್ಯು ಮತ್ತು ಗುಳ್ಳನ ಕಥನ– ಕಲಾವಿದರಾಗಿ ವಿಷ್ಣುವರ್ಧನ್, ಎಂ.ಪಿ. ಶಂಕರ್ ಮತ್ತು ಲೋಕೇಶ್‌ರ ಸಾಧ್ಯತೆಗಳನ್ನು ತೋರಿಸಿಕೊಟ್ಟ ಸಿನಿಮಾ ಕೂಡ ಹೌದು.

'ಹೇಮಾವತಿ' ಸಿನಿಮಾ ಗಾಂಧಿಯ ಆದರ್ಶಗಳನ್ನು ಸ್ವತಂತ್ರ ಭಾರತದಲ್ಲಿ ಒರೆಗೆ ಹಚ್ಚುವ ಸಿನಿಮಾ. ರಾಮನ ಮಂದಿರವೊಂದನ್ನು ಕೇಂದ್ರವನ್ನಾಗಿಸಿಕೊಂಡು ಸಮಾಜದಲ್ಲಿನ ಜಾತಿವ್ಯವಸ್ಥೆಯನ್ನು ವಿಶ್ಲೇಷಿಸುವ ಈ ಸಿನಿಮಾ, ಸಮಾಜದ ಜಡತೆಯನ್ನು ಹಾಗೂ ಅದನ್ನು ಚಲನಶೀಲಗೊಳಿಸುವ ಅಗತ್ಯವನ್ನು ಬಹು ಸೊಗಸಾಗಿ, ವೈನೋದಿಕ ನೆಲೆಗಟ್ಟಿನಲ್ಲಿ ಚಿತ್ರಿಸಿದೆ.

'ನ್ಯಾಯವೇ ದೇವರು', 'ದೂರದ ಬೆಟ್ಟ', 'ನಾರದ ವಿಜಯ', 'ಭೂಲೋಕದಲ್ಲಿ ಯಮರಾಜ', 'ಬಿಳಿಗಿರಿಯ ಬನದಲ್ಲಿ' – ಸಿದ್ಧಲಿಂಗಯ್ಯನವರ ನಿರ್ದೇಶನದ ಕೆಲವು ಪ್ರಸಿದ್ಧ ಸಿನಿಮಾಗಳು.



ಗ್ರಾಮೀಣ ಭಾರತವನ್ನು ಅನನ್ಯವಾಗಿ ಚಿತ್ರಿಸಿದ ಸಿದ್ಧಲಿಂಗಯ್ಯ